ಸಾಕಾಗುವುದಿಲ್ಲ ಎಂದು. ಹಾಗಾದರೆ ನಮ್ಮ ರಾಜ್ಯದಲ್ಲಿ ಬೆಳೆದ ಹತ್ತಿ ಹೊರ ರಾಜ್ಯಕ್ಕೆ ಹೋಗತಕ್ಕಂಥ ಪರಿಸ್ಥಿತಿ ಏಕೆ ಉಂಟಾಯಿತು? ನಮ್ಮ ಗಿರಣಿಗಳಿಗೇ ಇಲ್ಲಿ ಬೆಳೆಯುವಂಥ ಹತ್ತಿ ಸಾಕಾಗುವುದರಿಂದ, ಹತ್ತಿಗೆ ಕನಿಷ್ಟ ಬೆಲೆ ನಿಗದಿ ಮಾಡುವ ಆಲೋಚನೆ ಮಾಡಿದರೆ ಹತ್ತಿ ಬೆಳೆಗಾರರಿಗೂ ಅನುಕೂಲವಾಗುತ್ತದೆ. ಹತ್ತಿ ಬಟ್ಟೆಗೂ ಮತ್ತು ಹತ್ತಿ ಮಾರಾಟಕ್ಕೂ ಯಾವತ್ತೂ ಸಂಬಂಧ ಇರಬೇಕು. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಲೋಚನೆ ಮಾಡಿದ್ದರೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಎಸ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಇದು ಒಂದು ವಿಚಿತ್ರವಾದ ಸಮಸ್ಯೆ. ಅದಕ್ಕಾಗಿಯೇ ಈ ಬಗ್ಗೆ ಒಂದು ಮಂಡಳಿ ರಚನೆ ಮಾಡಬೇಕೆಂದು ಆಲೋಚನೆ ಮಾಡಲಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆದಂತ ಹತ್ತಿಯಲ್ಲಿ 30 ಭಾಗವನ್ನು ನಾವು ಉಪಯೋಗ ಮಾಡುತ್ತೇವೆ, ಕೆಲವು ಸಂದರ್ಭಗಳಲ್ಲಿ ನಮ್ಮ ಗಿರಣಿಗಳವರು ಹೊರ ರಾಜ್ಯಗಳಿಂದಲೂ ಹತ್ತಿಯನ್ನು ತರಿಸುತ್ತಾರೆ. ನಮ್ಮಲ್ಲಿನ ಹತ್ತಿ ಬೇರೆ ಕಡೆ ಹೋಗುತ್ತದೆ. ಇದಕ್ಕೆ ಹಲವಾರು ಕಾರಣ ಮತ್ತು ಸಮಸ್ಯೆಗಳಿವೆ. ನಮ್ಮ ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ನಮ್ಮ ಗಿರಣಿಗಳು ಉಪಯೋಗ ಮಾಡದೆ ಅದನ್ನು ತಮಿಳುನಾಡಿನಲ್ಲಿ ಉಪಯೋಗ ಮಾಡುವ ಹಾಗಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂಬ ಉದ್ದೇಶದಿಂದಲೇ ಈ ಬಗ್ಗೆ ಒಂದು ಮಂಡಳಿ ರಚನೆ ಮಾಡಬೇಕೆಂದು ಯೋಚನೆ ಮಾಡಲಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ, ಕಳೆದ ವರ್ಷದ ಹತ್ತಿ ಧಾರಣೆಗೆ ಹೋಲಿಸಿದರೆ ಈ ವರ್ಷ ಒಂದು ಕ್ವಿಂಟಾಲ್ ಹತ್ತಿಗೆ ಒಂದು ಸಾವಿರ ರೂಪಾಯಿ ಧಾರಣೆ ಕಡಿಮೆಯಾಗಿದೆ. ಇದರಿಂದಾಗಿ ಹತ್ತಿ ಬೆಳೆಯತಕ್ಕಂಥ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ, ಹತ್ತಿಗೆ ಒಂದು ಸ್ಥಿರವಾದ ಬೆಲೆಯನ್ನು ಕೊಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುತ್ತದೆಯೇ?

ಶ್ರೀ ಎಂ.ಎಸ್. ಪಾಟೀಲ್:- ಈ ವಿಷಯದ ಜವಳಿಗೆ ಸಂಬಂಧಪಡದೇ ಇದ್ದರೂ ಸಹಾ ಹತ್ತಿ ಬೆಳೆಗಾರರ ಸಮಸ್ಯೆಯನ್ನು ಮನಗಂಡು ಸಿ.ಸಿ.ಐ.ನವರು ಬೆಲೆಯನ್ನು ನಿಯಂತ್ರಣ ತರುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

**ವಿಷಯ:-** ಎನ್.ಜಿ.ಇ.ಎಫ್ ನಿಂದ ಆಸ್ತಿ ತೆರಿಗೆ ಬಾಕಿ.

21(121)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಎನ್.ಜಿ.ಇ.ಎಫ್ ಕಾರ್ಖಾನೆ ಸ್ಥಳೀಯ ಸಂಸ್ಥೆಗೆ ಆಸ್ತಿ ತೆರಿಗೆಯನ್ನು ಪಾವತಿ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಆ) ಸ್ಥಳೀಯ ಸಂಸ್ಥೆಗೆ ಆಸ್ತಿ, ತೆರಿಗೆ ಬಾಕಿಯನ್ನು ಪಾವತಿ ಮಾಡಲು ಎನ್.ಜಿ.ಇ.ಎಫ್. ಕಾರ್ಖಾನೆಗೆ ಆದೇಶ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಆ) ಎನ್.ಜಿ.ಇ.ಎಫ್. 1995-96ರ ವರ್ಷವನ್ನು ಬಿಟ್ಟು, 1996-97ರ ವರೆಗೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಆಸ್ತಿ ತೆರಿಗೆಯನ್ನು ಸಂದಾಯ ಮಾಡಿದೆ. 1996-97ರ ಅವಧಿಯಲ್ಲಿ ಆಸ್ತಿ ತೆರಿಗೆಯನ್ನು ಬೆಂಗಳೂರು ನಗರ ಮಹಾ ಪಾಲಿಕೆಗೆ ಸಂದಾಯ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಶ್ವತ್ಥ ನಾರಾಯಣ ರೆಡ್ಡಿ:- ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದ ಪ್ರಕಾರ ಪ್ರಾಪರ್ಟಿ ಟ್ಯಾಕ್ಸ್‌ನ್ನು 1995-96ಕ್ಕೆ ಬಿಟ್ಟು ಕಟ್ಟಿದ್ದೇವೆಂದು ಹೇಳಲಾಗಿದೆ. ನನಗೆ ತಿಳಿದಿರುವ ಸುದ್ದಿ ಪ್ರಕಾರ ಎನ್.ಜಿ.ಇ.ಎಫ್. ಸಂಸ್ಥೆ ನ್ಯಾಯಾಲಯದಿಂದ ತಡೆ ಆಜ್ಞೆ ಪಡೆದಿದೆ ಎಂದು ಗೊತ್ತಾಗಿದೆ. ಇದು ನಿಜವೊ? ಅಥವಾ ಸುಳ್ಳೊ? ಪಾವತಿ ಮಾಡಿದ್ದೇ ಆಗಿದ್ದರೆ, 10 ವರ್ಷಗಳಿಂದ ಯಾವ ಯಾವ ಸಂಸ್ಥೆಗೆ ಎನ್.ಜಿ.ಇ.ಎಫ್. ಸಂಸ್ಥೆ ಎಷ್ಟು ಹಣ ಪಾವತಿ ಮಾಡಿದೆ ಎಂದು ತಿಳಿಸಲಾಗುತ್ತದೆಯೇ?

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, 1994-95ರ ವರೆಗೆ ಎನ್.ಜಿ.ಇ.ಎಫ್.ನವರು ಪ್ರತಿ ವರ್ಷ 3,04,349 ರೂಪಾಯಿಗಳ ಟ್ಯಾಕ್ಸ್‌ನ್ನು ಪಂಚಾಯಿತಿಗೆ ಕಟ್ಟಿದ್ದಾರೆ. 1995-96ರಲ್ಲಿ ಟ್ಯಾಕ್ಸ್ ಡಿಮ್ಯಾಂಡ್‌ನ್ನು ಒಂದೆ ಸಾರಿ 57 ಲಕ್ಷ ರೂಪಾಯಿಗಳಿಗೆ ಏರಿಸಲಾಯಿತು. 3 ಲಕ್ಷ ಚಿಲ್ಲರೆ ಯಿಂದ ಒಂದೇ ಸಾರಿ 57 ಲಕ್ಷ ರೂಪಾಯಿಗಳಿಗೆ ಏರಿಸಿರುವುದು ಸರಿಯಲ್ಲವೆಂದು ಎನ್.ಜಿ.ಇ.ಎಫ್.ನವರು ಡಿಸ್ಪ್ಯೂಟ್ ಮಾಡಿ ಇದನ್ನು ಪರಿಶೀಲಿಸಿ ಎಂದು ಹೇಳಿದ್ದಾರೆ. ಇದುವರೆಗೂ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ಇದು ಕಾರ್ಪೋರೇಷನ್‌ಗೆ ಸೇರಿರುವುದರಿಂದ ಈ ಬಗ್ಗೆ ಕಾರ್ಪೋರೇಷನ್ ಜೊತೆಯಲ್ಲಿ ಮಾತುಕತೆ ನಡೆಯುತ್ತಿದೆ. ಕಾರ್ಪೋರೇಷನ್‌ನವರು ಪುನಃ ಒಂದು ಡಿಮ್ಯಾಂಡ್ ಕಳುಹಿಸಿ 57 ಲಕ್ಷ ರೂಪಾಯಿ ತುಂಬಬೇಕೆಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಅಪೀಲ್ ಹೋಗುತ್ತಿದ್ದೇವೆ. ಅಪೀಲ್‌ನಲ್ಲಿ ಏನು ನಿರ್ಣಯ ಆಗುತ್ತದೆಯೋ ಅದರ ಪ್ರಕಾರ ಹಣವನ್ನು ತುಂಬಲಾಗುತ್ತಿದೆ.

**4. ಪ್ರಕಟಣೆ**

ಅಧ್ಯಕ್ಷರು:- ನಾಗಾಲ್ಯಾಂಡ್ ವಿಧಾನ ಸಭೆಯ ಸನ್ಮಾನ್ಯ ಉಪಾಧ್ಯಕ್ಷರಾದ ಡಬ್ಲ್ಯೂ ವಾಂಗ್ಯು ಕೊಮಾಯಕ್ ರವರು ಆಫೀಸರ್ಸ್ ಗ್ಯಾಲರಿಯಲ್ಲಿ ಕುಳಿತು ಸದನದ ಕಲಾಪಗಳನ್ನು ವೀಕ್ಷಿಸುತ್ತಿದ್ದಾರೆ. ಅವರಿಗೆ ನಾನು ಸ್ವಾಗತವನ್ನು ಬಯಸುತ್ತಿದ್ದೇನೆ.